# ಸ್ಯೆಂಟ್ ಜೋನ್ಸ್ ಅಕಾಡೆಮಿ ಶಾಲೆ

"ಶಂಕರಪುರ" ಊರಿಗೊಂದು ಆಂಗ್ಲ ಮಾಧ್ಯಮ ಶಾಲೆ ಬೇಕೆಂದು ಊರ ಮಹನೀಯರು ಕಂಡ ಒಂದು ದೊಡ್ಡ ಕನಸು. ನಮ್ಮ ಊರಿನ ಸಿರಿವಂತರು ಆಂಗ್ಲ ಮಾದ್ಯಮ ಶಾಲೆಗಳನ್ನು ಹುಡುಕಿಕೊಂಡು ಉಡುಪಿಗೋ, ಬ್ರಹ್ಮಾವರಕ್ಕೋ ಅಥವಾ ಶಿರ್ವಾಕ್ಕೋ ಹೋಗುವ ಕಾಲವದು. ಆ ಕನಸು ನನಸಾಗುವಲ್ಲಿ ಊರಿನ ಸರ್ವ ಜನರ ಶ್ರಮಕ್ಕೆ, ದೇವರು ನೀಡಿದ ಫಲವೇ "ಸ್ಯೆಂಟ್ ಜೋನ್ಸ್ ಅಕಾಡೆಮಿ" ಆಂಗ್ಲ ಮಾದ್ಯಮ ಶಾಲೆ.

1998 ಜೂನ್ 1 ರಂದು ಬಿತ್ತಿದ ಸ್ಯೆಂಟ್ ಜೋನ್ಸ್ ಅಕಾಡೆಮಿ ಎಂಬ ಬೀಜವು 25 ಸಂವತ್ಸರಗಳನ್ನು ಕಳೆದು **26** ನೇ ವರುಷಕ್ಕೆ ಕಾಲಿಡುತ್ತಿದೆ. ವಂದನಿಯ ಫಾ. ಜೆ.ಪಿ. ತಾವ್ರೊ ಸ್ಮಾರಕ ಕಟ್ಟಡದಲ್ಲಿ, ವಂ. ಗುರು ವಿನ್ಸೆಂಟ್ ಮೊಂತೇರೊ ಇವರ ನೇತೃತ್ವದಲ್ಲಿ, ಶ್ರೀಮತಿ ಐಡ ಕರ್ನೆಲಿಯೊ ಇವರ ಸಾರಥ್ಯದಲ್ಲಿ, 35 ಪುಟ್ಟ ಮಕ್ಕಳೊಂದಿಗೆ LKG, UKG, ಒಂದನೇ ತರಗತಿ ಪ್ರಾರಂಭವಾಯಿತು.

1998 ಜುಲೈ ತಿಂಗಳ 12ನೇ ತಾರೀಕಿನಂದು ಮಂಗಳೂರು ಧರ್ಮಪ್ರಾಂತ್ಯದ ಬಿಷಪ್ ಅತೀ. ವಂ. ಅಲೋಶಿಯಸ್ ಪೌಲ್ ಡಿಸೋಜ ಇವರು ಅಧಿಕೃತವಾಗಿ ಆಶೀರ್ವಚಿಸಿದರು. 35 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಶಾಲೆಯು ಹಂತ ಹಂತವಾಗಿ ಬೆಳೆದು 2007 – 2008 ರಲ್ಲಿ ಎಸ್. ಎಸ್. ಎಲ್.ಸಿ. ಹಂತಕ್ಕೆ ತಲುಪಿತು. ಆ ವರ್ಷ 22 ವಿದಾರ್ಥಿಗಳಿದ್ದು ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾದದ್ದು ಹೆಮ್ಮೆಯ ವಿಷಯ.

2009 –2010 ರಲ್ಲಿ ಶಾಲಾ ಸಂಚಾಲಕರಾಗಿ ವಂ. ಗುರು ಡಾ. ಲೆಸ್ಲಿ ಡಿಸೋಜರವರು ಆಗಮಿಸಿದರು. ಇವರು ಶಾಲೆಯ ಅಭಿವೃದ್ದಿಗಾಗಿ ತುಂಬಾ ಶ್ರಮಪಟ್ಟರು. ಹೆಚ್ಚಿನ ವ್ಯವಸ್ಥೆಗಾಗಿ 2013–14 ರಲ್ಲಿ ಪ್ರೌಢಶಾಲಾ ವಿಭಾಗ ಹಾಗೂ ಪ್ರಾಥಮಿಕ ಶಾಲಾ ವಿಭಾಗ ಎಂದು ವಿಭಜಿಸಲಾಯಿತು. ಎಲ್. ಕೆ.ಜಿ. ಯಿಂದ ಐದನೇ ತರಗತಿ ವರೆಗೆ ಸಿಸ್ಟರ್ ವಿನ್ನಿ ಡಿಸೋಜ ಇವರನ್ನು ಶಾಲಾ ಮುಖ್ಯೋಪಾಧ್ಯಾಯಿನಿಯಾಗಿ ನೇಮಿಸಲಾಯಿತು. ನಂತರದ ವರ್ಷಗಳಲ್ಲಿ ಅವರು ಎಲ್. ಕೆ.ಜಿ. ಯಿಂದ ಏಳನೇ ತರಗತಿಯವರೆಗೆ ಮುಖ್ಯೋಪಾಧ್ಯಾಯಿನಿಯಾಗಿ ಕಾರ್ಯ ನಿರ್ವಹಿಸಿದರು. ಶ್ರೀಮತಿ ಐಡಾ ಕರ್ನೆಲಿಯೊರವರು ಎಂಟನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಮುಖ್ಯೋಪಾಧ್ಯಾಯಿನಿಯಾಗಿ ಕಾರ್ಯ ನಿರ್ವಹಿಸಿ 2016–17 ರಲ್ಲಿ ವಯೋ ನಿವೃತ್ತಿಹೋದಿದರು ತದನಂತರ ವಂದನೀಯ ಗುರು ವಿನ್ಸೆಂಟ್ ಕುವೆಲ್ಲೊರವರು ಪ್ರೌಢಶಾಲೆ ಹಾಗೂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಚುಕ್ಕಾಣಿಯನ್ನು ಹಿಡಿದು 2019 – 2020 ರವರೆಗೆ ಮುಂದುವರಿಸಿದರು.

COVID-19 ಕಾಲದಲ್ಲಿ ಹೊಸ ತಂತ್ರಜ್ಞಾನಗಳ ಮೂಲಕ ಆನ್‌ಲೈನ್ ತರಗತಿಗಳನ್ನು ಪ್ರಾರಂಭಿಸಿ ವಿದ್ಯಾರ್ಥಿಗಳ ಕಲಿಕೆಯ ಕಡೆಗೆ ಗಮನ ನೀಡಲಾಯಿತು. ಪ್ರಸ್ಥುತ ಹೈಸ್ಕೂಲ್ ಹಾಗೂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಜವಾಬ್ದಾರಿಯನ್ನು ಪ್ರಾಂಶುಪಾಲರಾಗಿ ಶ್ರೀಮತಿ ಪ್ರಿಯಾ ಕೆ. ಡೇಸಾರವರು ವಹಿಸಿರುತ್ತಾರೆ. ಉತ್ತಮ ಗುಣಮಟ್ಟದ ಆಂಗ್ಲಮಾದ್ಯಮದಲ್ಲಿ ಶಿಕ್ಷಣ ನೀಡುವ ಈ ಶಾಲೆಯು ನಮ್ಮೀ ಪರಿಸರದಲ್ಲಿ ಜನಪ್ರಿಯ ಶಾಲೆ. ಈ ಶಾಲೆಯಲ್ಲಿ ಸಂಚಾಲಕರಾಗಿ ಇಲ್ಲಿಗೆ ವರ್ಗವಾಗಿ ಬಂದ ಧರ್ಮಗುರುಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಇದರ ಪರಿಣಾಮವಾಗಿ ಈ ಶಾಲೆಯು ಕೆಲವು ವರ್ಷ ಎಸ್. ಎಸ್. ಎಲ್.ಸಿ. ಯಲ್ಲಿ 100% ಪಲಿತಾಂಶ ಕಂಡಿದೆ. ಹಾಗೂ ಪ್ರೌಢಶಾಲೆಯು ಕಲಿಕಾ ಗುಣಮಟ್ಟದಲ್ಲಿ ಗ್ರೇಡ್ "ಎ" ನ್ನು ಪಡೆದಿದೆ.

ಪ್ರಸ್ಥುತ ವಂದನೀಯ ಧರ್ಮಗುರು ಡಾ. ಪ್ರಕಾಶ್ ಅನಿಲ್ ಕಸ್ತಲಿನೊ ಇವರ ಸಂಚಾಲಕತ್ವದಲ್ಲಿ ಶಾಲೆಯು ಆಕರ್ಷಣೀಯ ಕಟ್ಟಡ ಹಾಗು ಪರಿಸರವನ್ನು ಹೊಂದಿ ಗುಣಮಟ್ಟದ ಶಿಕ್ಷಣ ನೀಡಲು ಪರಿಶ್ರಮಿಸುತ್ತಿದೆ. ಪ್ರೌಡಶಾಲೆಗಳಲ್ಲಿ ಕಲಿಕೆಯ ಜೊತೆಗೆ ಆಟೋಟ ಹಾಗೂ ಇತರ ಕಲಾ ಹಾಗೂ ಸಾಂಸ್ಕ್ರತಿಕ ಚಟುವಟಿಕೆಗಳನ್ನು ಸದಾ ಹಮ್ಮಿಕೊಳ್ಳಲಾಗುತ್ತಿದೆ.